# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟಸನ್ಸ್ ರಸ್ತೆ, ಫ್ರೇಜರ್ ಟೌನ್**

ಸ.ಕಾ.ನಿ.ಅ/ಪುನ/ಪಿಆರ್/ 03 /2022-23 ದಿನಾಂಕ: 04/06/2022

**ದಿನಾಂಕ:- 04-06-2022 ರಂದು ವಾರ್ಡ್ ನಂ.78 ರ ವಾರ್ಡ್ ಸಮಿತಿ ಹಾಗೂ ವಾರ್ಡ್ ವಿಪತ್ತು ನಿರ್ವಹಣಾ ಸಮಿತಿಯ ಸಭೆಯ ನಡುವಳಿಗಳು:-**

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಜಿ.ತಿಪ್ಪೇಸ್ವಾಮಿ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ನೇತಾಜಿ ರಸ್ತೆಯಲ್ಲಿ ಹಳೆ ದುರಸ್ಥಿಗೊಂಡಿರುವ ವಾಹನಗಳನ್ನು ನಿಲ್ಲಿಸಿರುವುದರ ಕಮಿಟಿ ಸದಸ್ಯರು ತಿಳಿಸಿರುತ್ತಾರೆ.
2. ವಾರ್ಡಿನ ಸಹಾಯಕ ಅಭಿಯಂತರರು ವಾರ್ಡಿನಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳ ಮಾಹಿತಿಯನ್ನು ನೀಡಿರುತ್ತಾರೆ.
3. ಕೋಲ್ಸ್ ರಸ್ತೆಯ ಇ ಮತ್ತು ಎಫ್ ಸ್ಟ್ರೀಟ್‌ನಲ್ಲಿ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಕಮಿಟಿ ಸದಸ್ಯರಾದ ಶ್ರೀ.ರಾಮಚಂದ್ರ ರವರು ತಿಳಿಸಿರುತ್ತಾರೆ.
4. ಪ್ರಾಮಿನೆಡ್ ರಸ್ತೆಯ 1ನೇ ಅಡ್ಡರಸ್ತೆಯಲ್ಲಿರುವ ಪಾರ್ಕಿನ ಗೇಟ್‌ನ್ನು ದುರಸ್ಥಿಗೊಳಿಸಲು ಮತ್ತು ಪಾರ್ಕಿನಲ್ಲಿ ಕಸ ಗುಡಿಸಲು ತಿಳಿಸಿರುತ್ತಾರೆ.
5. ವಾರ್ಡಿನಲ್ಲಿ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚಿರುವ ಬಗ್ಗೆ ಮಾಹಿತಿಯನ್ನು ತಿಳಿಸಿರುತ್ತಾರೆ.
6. ಸ್ಪೆನ್ಸ್‌ರ್ ಅಡ್ಡರಸ್ತೆಯಲ್ಲಿ ದುರಸ್ಥಿಗೊಂಡಿದ ಮ್ಯಾನ್‌ಹೋಲ್ ಸರಿಪಡಿಸಿರುವ ಬಗ್ಗೆ BWSSB ಸಹಾಯಕ ಕಾರ್ಯಪಾಲಕ ಅಭಿಯಂತರರು ಸೂಚಿಸಿರುತ್ತಾರೆ.
7. ಎಂ.ಎಂ ರಸ್ತೆಯ ಚರಂಡಿಗಳಲ್ಲಿ ಹೂಳು ತುಂಬಿರುವುದರ ಬಗ್ಗೆ ತಿಳಿಸಿರುತ್ತಾರೆ.
8. ನೇತಾಜಿ ರಸ್ತೆಯಲ್ಲಿ ಪಾದಚಾರಿಮಾರ್ಗವನ್ನು ಒತ್ತುವರಿಮಾಡಿಕೊಂಡು ವ್ಯಾಪರ ಮಾಡುತ್ತಿದ್ದ ತರಕಾರಿ ಅಂಗಡಿಗಳನ್ನು ತೆರವುಗೊಳಿಸಲು ತೆಗೆದು ಕೊಂಡಿರುವ ಕ್ರಮದ ಬಗ್ಗೆ ವಾರ್ಡಿನ ಆರೋಗ್ಯ ಪರಿವೀಕ್ಷಕರು ಮತ್ತು ಅಭಿಯಂತರರವರು ತಿಳಿಸಿರುತ್ತಾರೆ.
9. ವೀರಣ್ಣ ಗಾರ್ಡನ್ ಮತ್ತು ಅಡ್ಡರಸ್ತೆಗಳಲ್ಲಿ ಒಳಚರಂಡಿ ವ್ಯವಸ್ಥೆಯು ಸರಿ ಇಲ್ಲದಿರುವ ಬಗ್ಗೆ ಕಮಿಟಿ ಸದಸ್ಯರು ತಿಳಿಸಿರುತಾರೆ.
10. ಕಮಿಟಿಯ ಎಲ್ಲಾ ಸದಸ್ಯರು ತಮ್ಮ ತಮ್ಮ ಏರಿಯಾದಲ್ಲಿ ತಪಾಸಣೆ ನಡೆಸಿ ಉಳಿದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿ ನೀಡಲು ಕಮಿಟಿ ಅಧ್ಯಕ್ಷರ ರವರು ತಿಳಿಸಿದರು.
11. ವಾರ್ಡಿನಲ್ಲಿ ಬಹುಮಹಡಿ ಹಾಗೂ ವಾಣಿಜ್ಯ ಕಟ್ಟಡಗಳ ಕಂದಾಯ ವಸೂಲಾತಿಯಾಗಿರುವ ಮಾಹಿತಿಯನ್ನು ನೀಡಲು ಕಮಿಟಿ ಅಧ್ಯಕ್ಷರ ರವರು ತಿಳಿಸಿರುತ್ತಾರೆ

Scanned with CamScanner

ನಂತರ ಮುಂದಿನ ಸಭೆಯೊಳಗೆ ವಾರ್ಡ್ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲು ಸೂಚಿಸುತ್ತಾ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು

ಕಾರ್ಯದರ್ಶಿ

**ಪ್ರತಿಯನ್ನು:**

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.

Scanned with CamScanner